ಇಲಾಖೆಯಲ್ಲಿ ಸರ್ವೆಯರ್ಸ್ ಬಹಳ ಕಡಿಮೆ ಇದ್ದಾರೆ. ಆದ್ದರಿಂದ ಕಂದಾಯ ಇಲಾಖೆಯ ಸರ್ವೆಯರ್ಸ್‌ನ್ನು ನಮ್ಮ ಇಲಾಖೆಗೆ ಕಳುಹಿಸಿಕೊಡಬೇಕೆಂದು ಕೇಳಿದ್ದೇವೆ. ಎಲ್ಲಾ ಕೆರೆಗಳ ಸರ್ವೆ ಕೆಲಸ ಆಗಬೇಕೆಂದು ಮನವಿ ಬರುತ್ತದೆಯೋ ಅಲ್ಲಿ ನೀವು ಹೋಗಿ ಕೆರೆಗಳ ಸರ್ವೆ ಕೆಲಸ ಮಾಡಿಕೊಡಬೇಕೆನ್ನುವ ನಿರ್ದೇಶನ ಕೊಟ್ಟಿದ್ದಾರೆ. ಹಾಗಾಗಿ ಇವತ್ತು ನೀರು ಬಳಕೆದಾರರ ಸಹಕಾರ ಸಂಘದ ಮೂಲಕ ಯಾರೇ ಬಂದು ಕೆರೆಗಳ ಸರ್ವೆ ಕೆಲಸ ಮಾಡಬೇಕೆಂದು ಬರೆದು ಕೊಟ್ಟರೆ ತಕ್ಷಣ ಸರ್ವೆಕೆಲಸ ಮಾಡಿ ಕೊಡುತ್ತಾರೆ. ಸರ್ವೆ ಮಾಡುವಂಥಾದ್ದು ಬಹಳ ಮುಖ್ಯ. ಈಗ ಏಕೆ ಒತ್ತುವರಿ ಮಾಡಿದ್ದಾರೆಂದರೆ ನೀರು ನಿಂತಿಲ್ಲ ಎಂದು ಒತ್ತುವರಿ ಮಾಡಿದ್ದಾರೆ. ನಾವು ನೀರು ನಿಲ್ಲಿಸುವಂತಾದ್ದಕ್ಕೆ ಮೊದಲು ಆದ್ಯತೆ ಕೊಟ್ಟರೆ ಒತ್ತುವರಿ ಮಾಡಿರತಕ್ಕಂಥವರು ಹಿಂದಕ್ಕೆ ಹೋಗುತ್ತಾರೆ. ಒತ್ತುವರಿ ಮಾಡಿಕೊಂಡಿರುವವರು ಬಹಳಷ್ಟು ಜನ ಕಡುಬಡವರೇ. ಇವತ್ತು ನೀರು ಬಳಕೆದಾರರ ಸಹಕಾರ ಸಂಘಕ್ಕೆ ಆ ಜವಾಬ್ದಾರಿಯನ್ನು ಸಹ ಕೊಟ್ಟಿದೆ. ನಮ್ಮ ಕೆರೆ ನಮ್ಮ ಹಕ್ಕು ಎನ್ನುವ ಕಾರ್ಯಕ್ರಮದ ಮೂಲಕ ಇವತ್ತು ಕಾರ್ಯನಿರ್ವಹಣೆ ಆಗುತ್ತಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಭರವಸೆ ಕೊಟ್ಟಿದ್ದಾರೆ ಅದು ಈಗಾಗಲೇ ಕಾರ್ಯ ರೂಪಕ್ಕೆ ಬಂದಿದೆ. ಅದೇ ರೀತಿಯಲ್ಲಿ ಮಾನ್ಯ ಸಂಪಂಗಿಯವರು ಹೇಳಿದ ಹಾಗೆ ಟ್ಯಾಕ್ಟರ್ಸ್ ಇಲ್ಲದೇ ಇರುವ ಕಡೆ ಶ್ರಮದಾನ ಎನ್ನುವ ಕಾರ್ಯಕ್ರಮ ಇದೆ. ಅವರು ಮುಂದೆ ಬಂದರೆ ಆ ಕೆಲಸವನ್ನು ಮಾಡಿಸಬಹುದು. ಟ್ಯಾಕ್ಟರ್ಸ್ ಇರುವವರು ಟ್ಯಾಕ್ಟರ್ಸ್ ತರಬಹುದು, ಇಲ್ಲದೇ ಇರತಕ್ಕಂಥವರು ಏನು ಮಾಡುವುದು? ಆದ್ದರಿಂದ ರೈತರ ಜೊತೆ ಸಹಕಾರ ಮಾಡಿಕೊಂಡು ಈ ಕಾರ್ಯಕ್ರಮ ಯಶಸ್ವಿಗೊಳಿಸಬಹುದು.

ಪುರಾತನ ದೇವಸ್ಥಾನದ ಡಾವಂಜೆ ದೇವಸ್ಥಾನ ಗುಡ್ಡದ ಮೇಲಿದ್ದು ಸುತ್ತಲೂ ನದಿ ನೀರು ಹರಿಯುವುದರಿಂದ ತಡೆಗೋಡೆ ನಿರ್ಮಾಣ.

124 (1483) ಶ್ರೀ ಅಭಯಚಂದ್ರ. ಕೆ. (ಮೂಡಬಿದರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪುರಾತನ ದೇವಸ್ಥಾನದ ಡಾವಂಜೆ ದೇವಸ್ಥಾನ ಗುಡ್ಡದ ಮೇಲಿದ್ದು ಸುತ್ತಲೂ ನದಿ ಹರಿಯುತ್ತಿದ್ದು, ಅದರಿಂದ ನದಿ ಕೊರೆತ ಪ್ರಾರಂಭವಾಗಿ ದೇವಸ್ಥಾನಕ್ಕೆ ಅಪಾಯ ಬರುವ ಮುನ್ನ ತಡೆಗೋಡೆ ಕಟ್ಟಲು ಸರ್ಕಾರ ಮುಂದಾಗುವುದೇ;

2) ಮುಲ್ಕಿ ಕೊಳಚೆ ಕಂಬಳದಲ್ಲಿ ನದಿ ಕೊರೆತದಿಂದ ಆಸಾಹುತ ಸಂಭವಿಸುತ್ತಿದ್ದು, ನದಿದಂಡೆ ಕಟ್ಟಲು ಎಷ್ಟು ಹಣ ಒದಗಿಸಲಾಗಿದೆ;

3) ಮುಲ್ಕಿ ಚಂದ್ರ ಶ್ಯಾನುಭಾಗ ಕುದ್ರುಗೆ ನದಿದಂಡೆ ಕಟ್ಟಲು ಎಷ್ಟು ಹಣ ಒದಗಿಸಲಾಗಿದೆ;

4) ಪಶ್ಚಿಮಾಭಿಮುಖವಾಗಿ ಹರಿಯುವ ನೀರನ್ನು ಕೃಷಿಗಾಗಿ ಸದುಪಯೋಗ ಪಡೆಯಲು ಯೋಜನೆಯನ್ನು ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ಚಾಲ್ತಿ ಸಾಲಿನಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೇ;

5) ಈ ಯೋಜನೆ ಪ್ರಾರಂಭಿಸಲು ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪಣ್ಣ ನೀರಾವರಿ ಮತ್ತು ಸಣ್ಣ ನೀರಾವರಿ ಮಂತ್ರಿ ಸಚಿವರು)

1) ಹೌದು

2) 3 ಸಾವಿರ ರೂಗಳ ಅನುದಾನವನ್ನು ಅಂಯವ್ಯಯದಲ್ಲಿ ಒದಗಿಸಲಾಗಿದೆ.

3) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

4) ಹೌದು. 145.50 ಕೋಟಿ ರೂಗಳ ಸಮಗ್ರ ಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆಗೆ ಹುಡ್ಕೋ ಸಂಸ್ಥೆಯಿಂದ ಆರ್ಥಿಕ ನೆರವು ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. ಹುಡ್ಕೋ ಸಂಸ್ಥೆಯಿಂದ ಆರ್ಥಿಕ ನೆರವು ದೊರೆತ ನಂತರ ಯೋಜನೆಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ-1

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ಪುಟಸಂಖ್ಯೆ ಕ್ರಮಸಂಖ್ಯೆ	ಆದಮಚ್ಚ	ಷರಾ
1)	ಮಂಗಳೂರು ತಾಲ್ಲೂಕಿನಚಂದ್ರ ಶಾನುಬೋಗರ ಕುದ್ರು ಹತ್ತಿರ ಸಂರಕ್ಷಣಾ ಕಾಮಗಾರಿ 180 ಮೀ.ಉದ್ದ (ಡಿಇಆರ್ ಸಂ: 1:2000-01: ದಿ: 20-4-2000)	4.00	0.01	321:77	4.34	ಪೂರ್ಣಗೊಂಡಿದೆ
2)	-ಅದೇ- (ಸಿ.ಆರ್.ಸಂ: 85: 97-98 ದಿ:31-3-98)	6.32	-	358:383	7.35	"
3)	ಚಂದ್ರ ಶಾನುಬೋಗರ ಕುದ್ರುವಿಗೆ ಹೋಗುವ ಹಜಮಾಡಿಗುಂಡಿ ರಸ್ತೆಯ ಪಕ್ಕ ಶಾಂಭವಿ ನದಿಗೆ ತುರ್ತು ನದಿದಂಡೆ ಸಂರಕ್ಷಣಾ ಕಾಮಗಾರಿ 180 ಮೀ. ಉದ್ದ (ಸಿಆರ್ ಸಂ: 17:97-98: 9-7-98)	6.32	0.01	306:467	6.26	"
4)	ಚಂದ್ರ ಶಾನುಬೋಗರ ಕುದ್ರುವಿನ ಪಶ್ಚಿಮಕ್ಕೆ ನದಿದಂಡೆ ಸಂರಕ್ಷಣಾ ಕಾಮಗಾರಿ 100 ಮೀ ಉದ್ದ (ಸಿಆರ್ ಸಂ: 110:2000-01:ದಿನಾಂಕ: 6-9-2000)	3.00	0.90	367:489	-	ಪ್ರಗತಿಯಲ್ಲಿದೆ
5)	ಚಂದ್ರ ಶಾನುಬೋಗರ ಕುದ್ರುವಿನಲ್ಲಿ ಶಾಂಭವಿ ನದಿಗೆ ತಡೆಗೋಡೆ ನಿರ್ಮಾಣ 290 ಮೀ. (ಸಿಆರ್ ಸಂ: 68: 99-2000:ದಿನಾಂಕ:24-9-99)	6.00	0.01	335:133	7.01	ಪೂರ್ಣಗೊಂಡಿದೆ.
6)	ಹಜಮಾಡಿಗುಂಡಿ ರಸ್ತೆ ಪಕ್ಕ ಶಾಂಭವಿ ನದಿಗೆ ನದಿದಂಡೆ ಸಂರಕ್ಷಣಾ ಕಾಮಗಾರಿ	6.00	0.01	336:152	-	ಶೇ.30 ರಷ್ಟು ಅನುದಾನವಿಲ್ಲ
7)	ಚಂದ್ರ ಶಾನುಬೋಗರ ಕುದ್ರುವಿನ ಜಳಕದ ಕೆರೆಯ ಪೂರ್ವಕ್ಕೆ ನದಿದಂಡೆ ಸಂರಕ್ಷಣಾ ಕಾಮಗಾರಿ	10.00	0.01 0.95	337:153		-"-
			ಒಟ್ಟು	24.96 ಲಕ್ಷ		

(ಶ್ರೀ ಕೆ. ಅಭಯಚಂದ್ರ ಅವರ ಪರವಾಗಿ ಶ್ರೀ ಗೋಪಾಲ ಭಂಡಾರಿಯವರು ಪ್ರಶ್ನೆ ಕೇಳಿದರು.)

ಶ್ರೀ ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಅಮಂಜೆ ದೇವಸ್ಥಾನ ಬಹಳ ಪುರಾತನವಾದ ದೇವಸ್ಥಾನ ಇದರ ಸುತ್ತ ನದಿ ಹರಿಯುತ್ತಿದ್ದು ಇದರಿಂದ ಕೊರೆತ ಪ್ರಾರಂಭವಾಗಿ, ದೇವಸ್ಥಾನ ಅಪಾಯದ ಅಂಚಿನಲ್ಲಿದೆ ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಮತ್ತು ಇದಕ್ಕೆ ತಡೆಗೋಡೆ ನಿರ್ಮಾಣ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಇದಕ್ಕೆ ಅಂದಾಜು ಪಟ್ಟಿ ಆಗಿದೆಯೇ? ತುರ್ತಾಗಿ ಈ ಕೆಲಸ ಮಾಡಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ಇದರ ಜೊತೆಗೆ ಮುಲ್ಕಿ ಕೊಳಚೆ ಕಂಬಳ ಇಲ್ಲಿ ನದಿ ಕೊರೆತದಿಂದ ನದಿ ದಂಡೆ ಸಾಕಷ್ಟು ನಷ್ಟವಾಗಿದೆ ಆದ್ದರಿಂದ ಇದಕ್ಕೆ ಮೂರು ಸಾವಿರ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ ಎಂದು ಇದೆ. ಈ ಮೂರು ಸಾವಿರ ರೂಪಾಯಿಗಳಲ್ಲಿ ಆ ನದಿ ದಂಡೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಅದಕ್ಕೆ ಬದಲಿ ವ್ಯವಸ್ಥೆಯನ್ನು ಏನಾದರೂ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆಯೇ? ಇದರ ಜೊತೆಗೆ ಪಶ್ಚಿಮಾಭಿಮುಖವಾಗಿ ಹರಿಯುವ ನೀರನ್ನು ಕೃಷಿಗೆ ಉಪಯೋಗ ಮಾಡಲು ಯೋಜನೆಯನ್ನು ತಯಾರಿಸಲಾಗಿದೆ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಯಾವುದೇ ದೊಡ್ಡ ನೀರಾವರಿ ಯೋಜನೆಗಳು ಇಲ್ಲದೇ ಇರುವುದರಿಂದ ಸಾಕಷ್ಟು ನದಿಗಳು ಸಮುದ್ರಕ್ಕೆ ಹರಿದು ಸಿಹಿ ನೀರು ಎಲ್ಲಾ ಕೃಷಿಗೆ ಉಪಯೋಗವಾಗದೇ ಇರುವಂತಹ ಸಂದರ್ಭದಲ್ಲಿ ಇಂತಹ ಒಂದು ಯೋಜನೆಯನ್ನು ಮಾಡುವ ಯೋಜನೆ ಇದೆ ಎಂದು ಹೇಳಿ ಅದಕ್ಕೆ 145 ಕೋಟಿ ರೂಪಾಯಿಗಳ ಒಂದು ಸಮಗ್ರ ಯೋಜನೆ ತಯಾರು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಯೋಜನೆಯನ್ನು ಅನುಷ್ಠಾನ ಮಾಡಲಿಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ಇದಕ್ಕೆ ಈ ವರ್ಷ ಎಷ್ಟು ಅನುದಾನವನ್ನು ಇಟ್ಟಿದ್ದಾರೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪುರಾತನ ದೇವಸ್ಥಾನದ ಬಗ್ಗೆ ಹೇಳಿದರು. ಅದಕ್ಕೆ ಪಶ್ಚಿಮಾಭಿಮುಖವಾಗಿ ಹರಿಯುವಂತಹ ನದಿಗಳು ಯಾವ್ಯಾವ ಇವೆ ಜಿಲ್ಲೆಗಳಿಂದ ನಮಗೆ ನದಿ ಕೊರೆತ ಎಲ್ಲೆಲ್ಲಿ ಆಗಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಒಂದು ಸಮಗ್ರ ಕಾರ್ಯಕ್ರಮ ರೂಪಿಸುತ್ತಿದ್ದೇವೆ. ಈ ಸಂಬಂಧ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಕೇಂದ್ರ ಸರ್ಕಾರದವರು ಈ ಬಗ್ಗೆ ನಮ್ಮ ಉತ್ತರ ಭಾರತದಲ್ಲಿ ಹಾಕಿಕೊಂಡಿರುವುದರಿಂದ ನಾವು ಈ ಬಗ್ಗೆ ನಮ್ಮ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರನ್ನು ಕಂಡಾಗ ಅವರು ಈ ತರಹದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದರೆ ನಾವು ಆದಷ್ಟು ಬೇಗ ಸಹಾಯಧನ ನೀಡುತ್ತೇವೆಂದು ಹೇಳಿದರು. ಆ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮಕ್ಕೆ 3 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ ಎಂದು ಏನು ತಾವು ಕೇಳಿದಿರಿ ಮತ್ತು ಆ ದೇವಸ್ಥಾನಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಕೆಲಸ

ನಿರ್ವಹಿಸಿ ಕೊಡುತ್ತೇವೆ. ಅದೇ ರೀತಿಯಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ನೀರನ್ನು ಕೃಷಿಗೆ ಉಪಯೋಗಿಸಿಕೊಳ್ಳಲು ಪಶ್ಚಿಮವಾಹಿನಿ ಎನ್ನುವ ಒಂದು ಕಾರ್ಯಕ್ರಮ ರೂಪಿಸಿದ್ದೆವು. ಆದರೆ ಹಣಕಾಸಿನ ಸಮಸ್ಯೆಯಿಂದ ಈ ವರ್ಷ ನಾವು ಆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಆದರೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ನಮ್ಮ ಕರಾವಳಿ ಪ್ರದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಲು ಹಣಕಾಸಿನ ಲಭ್ಯತೆ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

12.50 ಪಿ.ಎಂ

ಶ್ರೀ ಎನ್. ಯೋಗೀಶ್ ಭಟ್: ಅಧ್ಯಕ್ಷರೇ, ಪಶ್ಚಿಮವಾಹಿನಿಗೆ ಸಂಬಂಧಿಸಿದಂತೆ ಅನೇಕ ನಿರೀಕ್ಷೆಗಳನ್ನು ನಾವು ಇಟ್ಟುಕೊಂಡಿದ್ದೆವು. ಇವತ್ತು ಮುಲ್ಕಿಯಲ್ಲಿ ಕುಡಿಯುವ ನೀರಿಗೆ ಬರಗಾಲ ಬಂದು ದೂರದ ಮಂಗಳೂರಿನಿಂದ ಟ್ಯಾಂಕರ್‌ಗಳಲ್ಲಿ ಸರಬರಾಜು ಮಾಡುವ ಅವ್ಯವಸ್ಥೆ ಬಂದಿದೆ. ಹಾಹಾಕಾರ ಉಂಟಾಗಿದೆ. ಈಗ ತುರ್ತು ವ್ಯವಸ್ಥೆ ಮಾಡಬೇಕಾಗಿದೆ. ಮುಲ್ಕಿ ಟೌನ್ ಪಂಚಾಯಿತಿ, ಬಿಜಿ ಪ್ರಾಜೆಕ್ಟ್ ಎಂದು ಸರ್ಕಾರ ನಿರ್ಲಕ್ಷ್ಯ ಮಾಡಿದೆಯೆಂದು ಒಂದು ಬೇಸರವೂ ಆಗುತ್ತಿದೆ. ಅದನ್ನು ಸರಿಪಡಿಸಬೇಕಾಗಿದೆ. ಹಾಗೇ ಪಶ್ಚಿಮವಾಹಿನಿ ಯೋಜನೆ ಏನಿದೆ ಬಜೆಟ್‌ನಲ್ಲಿ ಅದಕ್ಕೆ ಒಂದು ನಯಾಪೈಸೆ ಅನುದಾನ ಇಟ್ಟಿಲ್ಲ. ನಾವು ತುಂಬ ನಿರೀಕ್ಷೆ ಇಟ್ಟುಕೊಂಡಿದ್ದೆವು. ಈಗ ಹುಡ್ಕೋ ಕಡೆಯಿಂದ ಮಾಡುತ್ತೇವೆ ಎನ್ನುತ್ತೀರಿ. ಯಾವ ರೀತಿ ಮಾಡುತ್ತೀರಿ? ಕರಾವಳಿ ಪ್ರದೇಶಗಳಲ್ಲಿ ಮೂರು ಜಿಲ್ಲೆಗಳಲ್ಲೂ ಕುಡಿಯುವ ನೀರು, ನೀರಾವರಿ ಮತ್ತು ಜಲವಿದ್ಯುತ್ ಯೋಜನೆ ತರುವಂತಹ ಯೋಜನೆ ಇದು. ಯಾವುದೇ ಅನುದಾನ ಇಲ್ಲದಿರುವಾಗ ಹೇಗೆ ಮುಂದುವರೆಸುವಿರೆಂದು ವಿವರಿಸಬೇಕಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಅಧ್ಯಕ್ಷರೇ, ಪಶ್ಚಿಮವಾಹಿನಿ ಯೋಜನೆ ಹಮ್ಮಿಕೊಂಡಿದ್ದೇ ಬಹಳ ಆಶೆಯಿಂದ. ಕರಾವಳಿಯ ಶಾಸಕರಾದ ನಾವೆಲ್ಲ ಸೇರಿ ಒಂದು ಸಭೆ ಮಾಡಿದೆವು. ಸುಮಾರು 2 ಸಾವಿರ ಟಿಎಂಸಿಯಷ್ಟು ನೀರು ಕರಾವಳಿ ಪ್ರದೇಶದಲ್ಲಿ ಬೀಳುತ್ತದೆ. ಮಳೆಗಾಲದಲ್ಲಿ ಹೀಗೆ, ಆದರೆ ಬೇಸಿಗೆ ಬಂದರೆ ನಮಗೆ ಕುಡಿಯುವ ನೀರಿಗೂ ಸಮಸ್ಯೆ ಆಗಿದೆ. ಆದ್ದರಿಂದ ಚೆಕ್‌ಡ್ಯಾಂಗಳ ತರಹ ಮಾಡಬೇಕೆಂದು, ನಾವು 907 ವೆಂಟೆಡ್ ಡ್ಯಾಮ್ಸನ್ನು ನಾವು ಪ್ರಾಜೆಕ್ಟ್ ಮಾಡಿದ್ದೆವು. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಕಾರ್ಯಕ್ರಮ ಇದು. ಮೊದಲಿಗೆ ಇದರ ಬಗ್ಗೆ ಹುಡ್ಕೋ ಜೊತೆ ಪ್ರಸ್ತಾಪ ಮಾಡಿದ್ದೆವು. ಹಣಕಾಸಿಗಾಗಿ ಸ್ವಲ್ಪ ಮಾತುಕತೆಯೂ ನಡೆದಿದೆ. ಏಕೆಂದರೆ ಈ ತರಹದ ಕಾರ್ಯಕ್ರಮವನ್ನು ಹುಡ್ಕೋದವರೇ ಕೇರಳದಲ್ಲಿ ಅನುಷ್ಠಾನ ಮಾಡಿದ್ದಾರೆ. ಆ ಪೈಲಟ್ ಪ್ರಾಜೆಕ್ಟ್‌ನ್ನೇ ಇಟ್ಟುಕೊಂಡು ಇಲ್ಲಿ ಪಶ್ಚಿಮವಾಹಿನಿ ಕಾರ್ಯಕ್ರಮ ಮಾಡಿದ್ದು. ಹುಡ್ಕೋದವರೂ ಮಾಡಿಕೊಡುತ್ತೇವೆಂದು ಒಳ್ಳೆಯ ವಿಶ್ವಾಸ ತೋರಿದ್ದಾರೆ. ಅದು ಕಮ್ಯುನಿಕೇಟಾದರೆ ಅದಷ್ಟು ಬೇಗ ಕೈಗೆತ್ತಿಕೊಳ್ಳುತ್ತೇವೆ.